# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿಬಿಎಂಪಿ/ಯವ/ಕೊಉ/ಪಿಆರ್/01/2021-22

ಸಹಾಯಕ ಅಭಿಯಂತರರ ಕಛೇರಿ
ಕೊಡಿಗೇಹಳ್ಳಿ ಉಪವಿಭಾಗ, ಯಲಹಂಕ ವಲಯ
9ನೇ ಅಡ್ಡರಸ್ತೆ, ಡಿ ಬ್ಲಾಕ್
ಸಹಕಾರನಗರ, ಬೆಂಗಳೂರು 560092
ದಿನಾಂಕ: 06.04.2021

**ದಿನಾಂಕ: 06.04.2021 ರಂದು ವಾರ್ಡ್ ಸಮಿತಿಯ ಸಭೆಯ ನಡವಳಿಗಳು:-**

**ಸಭೆಗೆ ಹಾಜರಿದ್ದವರು:**

- ಶ್ರೀ ಗುರು, ಕಾರ್ಯಪಾಲಕ ಅಭಿಯಂತರರು, ನೋಡೆಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ.
- ಶ್ರೀ ಪ್ರವೀಣ್ ಎ.ಆರ್., ಕಿರಿಯ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ
- ಶ್ರೀಮತಿ. ಕವಿತಾ, ಕಿರಿಯ ಆರೋಗ್ಯ ಪರಿವೀಕ್ಷಕರು, ಘನ ತ್ಯಾಜ್ಯ
- ಶ್ರೀ. ಮಂಜುನಾಥ್, ಹಿರಿಯ ಆರೋಗ್ಯ ಪರಿವೀಕ್ಷಕರು, ಅರೋಗ್ಯ
- ಶ್ರೀ. ಡಾ॥ ಪ್ರೇಮಾನಂದ್, ಆರೋಗ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಡಿಗೇಹಳ್ಳಿ.
- ಶ್ರೀ. ಬಸವರಾಜ್, ಕಂದಾಯ ನಿರೀಕ್ಷಕರು, ವಾರ್ಡ್ ಸಂಖ್ಯೆ:08 ಕೊಡಿಗೇಹಳ್ಳಿ

ವಾರ್ಡ್ ಸಮಿತಿ ಸದಸ್ಯರು

- ಶ್ರೀ. ಅಂತೋನಿ ದಾಸ್, ವಸತಿ ಕ್ಷೇಮಾಭಿವೃದ್ದಿ ಸಂಘದ ಸದಸ್ಯರು
- ಶ್ರೀ ಶ್ರೀಕಾಂತ್, ಆರ್ಮ್ಕೋ ಬಡಾವಣೆ, ಸದಸ್ಯರು
- ಶ್ರೀ ವೆಂಕಟಸ್ವಾಮಿ, ದೇವಿನಗರ, ಸದಸ್ಯರು
- ಮುನಿಸ್ವಾಮಿ ನಾಯ್ಡು, ದೇವಿನಗರ, ಸದಸ್ಯರು
- ಶಬರಿ, ಅರವಿಂದ ಆರ್ಕಿಡ್ ಅಪಾರ್ಟ್‌ಮೆಂಟ್ ವಸತಿ ಕ್ಷೇಮಾಭಿವೃದ್ದಿ ಸಂಘದ ಸದಸ್ಯರು

ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮಿತಿ ಕಾಯದರ್ಶಿಗಳಾದ ಶ್ರೀ. ಪ್ರವೀಣ್ ಎ.ಆರ್. ರವರು ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಮಿತಿಯ ಸದಸ್ಯರುಗಳು ಹಾಗೂ ಎಲ್ಲಾ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು ಹಾಗೂ ಈ ಹಿಂದಿನ ಸಭೆಯಲ್ಲಿ ಚರ್ಚಿಸಿದ ಸಮಸ್ಯೆಗಳನ್ನು ಪರಿಹರಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಶ್ರೀ ಗುರು, ಕಾ.ಪಾ.ಅ ಹಾಗೂ ನೋಡಲ್ ಅಧಿಕಾರಿ ರವರು ಮಾತನಾಡುತ್ತ, ಹಿಂದಿನ ಸಭೆಯ ನಡುವಳಿಗಳ ಬಗ್ಗೆ ಓದಿ ಚರ್ಚಿಸಿ, ಸಮಸ್ಯೆಗಳನ್ನು ಬಗೆಹರಿಸಿರುವ ಕುರಿತು ಹಾಜರಿದ್ದ ಅಧಿಕಾರಿಗಳಿಗೆ ಮತ್ತು ವಸತಿ ಕ್ಷೇಮಾಭಿವೃಧಿ ಸಂಘದ ಸದಸ್ಯರುಗಳ ಜೊತೆಗೆ ಚರ್ಚಿಸಿದರು.

ಶ್ರೀಮತಿ. ಶಾಂತಕುಮಾರಿ, ಬಾಲಾಜಿ ಬಡಾವಣೆ ಸದಸ್ಯರು ಮತ್ತು ಬಾಲಾಜಿ ಬಡಾವಣೆ ನಿವಾಸಿಗಳು ಮಾತನಾಡಿ, ಒಂದು ತಿಂಗಳಿನಿಂದ ನೀರಿನ ಸಮಸ್ಯೆ ಕಾಡುತ್ತಿದ್ದು ಸರಿಯಾದ ಸಮಯಕ್ಕೆ ನೀರು ಪೂರೈಕೆ ಆಗುತ್ತಿಲ್ಲ, ಇದರಿಂದ ಬಹಳ ತೊಂದರೆ ಉಂಟಾಗಿದೆ ಎಂದು ತಿಳಿಸುತ್ತ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಸಮಸ್ಯೆ ಬಗೆಹರಿಸಿರುವುದಿಲ್ಲ ಅದನ್ನು ಸರಿಪಡಿಸಲು ಸಭೆಗೆ ಮನವಿ ಮಾಡಿದರು. ಜೊತೆಯಲ್ಲಿ ದೇವಿನಗರ ಎಲ್.ಕೆ.ಆರ್ ನಗರ ಹಾಗೂ ಭದ್ರಪ್ಪ ಬಡಾವಣೆಯಲ್ಲೂ ಸಹ ಇದೆ ರೀತಿಯ ಸಮಸ್ಯೆಯು ಉಂಟಾಗಿರುತ್ತದೆಯೆಂದು ಹಾಜರಿದ್ದ ಶ್ರೀ ವೆಂಕಟಸ್ವಾಮಿ, ಶ್ರೀ ಮುನಿಸ್ವಾಮಿ ನಾಯ್ಡು ಹಾಗೂ ಶ್ರೀ ರಾಜು ರವರು ಸಭೆಗೆ ತಿಳಿಸಿದರು.

ಈ ಕುರಿತು ನೋಡೆಲ್ ಅಧಿಕಾರಿಗಳು ಮಾತನಾಡಿ ಈ ಹಿಂದಿನ ಸಭೆಯಲ್ಲಿ ಈ ಕುರಿತು ಚರ್ಚಿಸಲಾಗಿತ್ತು ಕೆಲವೆಡೆ ಸಮಸ್ಯೆಗಳನ್ನು ಬಗೆಹರಿಸುವುದಾಗಿ ತಿಳಿಸಲಾಗಿತ್ತು ಮುಂದುವರೆದು ಸಮಸ್ಯೆಯು ಇನ್ನೂ ಇರುವುದರಿಂದ ಹಾಜರಿದ್ದ ಬಿಡಬ್ಲೂಎಸ್‌ಎಸ್‌ಬಿ ಅಧಿಕಾರಿಯಾದ ಶ್ರೀ ಮುನಿಸ್ವಾಮಿ ರವರಿಗೆ ಮೊದಲಿಗೆ ಸಮಸ್ಯೆ ಇರುವಂತಹ ಬಡಾವಣೆಗಳ ಕುರಿತು ತಿಳಿದುಕೊಂಡು ನೀರು ಸರಬರಾಜು ಪೂರೈಕೆಯಲ್ಲಿ ವ್ಯತ್ಯಯ ಇರುವ ಕಡೆಗೆ ಗಮನ ಹರಿಸಿ ನೀರು ಸರಬರಾಜನ್ನು ಸಮಪರ್ಕವಾಗಿ ಮಾಡಲು ತಿಳಿಸಲಾಯಿತು. ಮುಂದಿನ ಸಭೆಯಲ್ಲಿ ಈ ಕುರಿತು ಚರ್ಚೆಗೆ ಆಸ್ಪದ ನೀಡದಂತೆ ಕ್ರಮವಹಿಸಲು ಬಿಡಬ್ಲೂಎಸ್‌ಎಸ್‌ಬಿ ರವರಿಗೆ ತಿಳಿಸಲಾಯಿತು ಹಾಗೂ ಕಾವೇರಿ ಪೈಪ್‌ಲೈನ್ ಇಲ್ಲದ ಕಡೆಗೆ ಬೋರ್‌ವೆಲ್‌ನಿಂದ ಸರಬರಾಜು ಮಾಡುವ ಅವಕಾಶವಿದ್ದಲ್ಲಿ ಅವಶ್ಯಕ ರಿಪೇರಿ ಕಾರ್ಯಗಳನ್ನು ಕೈಗೊಂಡು ನೀರು ಸರಬರಾಜು ಸಮರ್ಪಕವಾಗಿರುವಂತೆ ಕ್ರಮವಹಿಸಲು ಶ್ರೀ ಪ್ರವೀಣ್ ಎ.ಆರ್, ಕಿರಿಯ ಅಭಿಯಂತರರು, ವಾರ್ಡ್ ನಂ.08 ರವರಿಗೆ ತಿಳಿಸಲಾಯಿತು.

ಶ್ರೀ ಸುಬ್ರಮಣಿ, ಮಾರುತಿನಗರ ಸದಸ್ಯರು ಮಾತನಾಡಿ ವಾರ್ಡ್‌ನ ಎಲ್ಲೆಡೆ ಅನಧಿಕೃತ ರಸ್ತೆ ಅಗೆಯುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಭೆಗೆ ಮನವಿ ಮಾಡಿಕೊಂಡರು.

ನೋಡೆಲ್ ಅಧಿಕಾರಿಗಳು ಮಾತನಾಡಿ ರಸ್ತೆ ಅಗೆತಗಳನ್ನು ಪರಿಶೀಲಿಸಿ, ವರದಿಯನ್ನು ಕೊಡಲು ಕಿರಿಯ ಅಭಿಯಂತರರವರಿಗೆ ಈ ಹಿಂದಿನ ಸಭೆಯಲ್ಲೆ ಸೂಚಿಸಲಾಗಿತ್ತು ಆದಕಾರಣ ಈ ಕುರಿತು ವರದಿಯನ್ನು ಸಭೆಗೆ ತಿಳಿಸಲು ಶ್ರೀ ಪ್ರವೀಣ್ ಎ.ಆರ್, ಕಿರಿಯ ಅಭಿಯಂತರರು, ವಾರ್ಡ್ ನಂ.08 ರವರಿಗೆ ಸೂಚಿಸಿಲಾಯಿತು. ಈ ಕುರಿತು ಶ್ರೀ ಪ್ರವೀಣ್ ಎ.ಆರ್. ಕಿರಿಯ ಅಭಿಯಂತರರು, ವಾರ್ಡ್ ನಂ.08 ರವರು ಮಾತನಾಡಿ ವಾರ್ಡ್‌ನಲ್ಲಿ ಕೆ.ಪಿ.ಟಿ.ಸಿ.ಎಲ್ ಹಾಗೂ ಬೆಸ್ಕಾಂ ರವರು ಅನುಮತಿ ಪಡೆದಿರುತ್ತಾರೆ. ಹಾಗೆಯೇ ಟಾಟಾ ಸ್ಕೈ ರವರು ಸಹ ಅನುಮತಿಯನ್ನು ಪಡೆದಿರುತ್ತಾರೆ. ಅನುಮತಿ ಇಲ್ಲದೆ ರಸ್ತೆ ಅಗೆತವನ್ನು ಕೈಗೊಂಡಲ್ಲಿ ನಿಲ್ಲಿಸುವುದಾಗಿ ಹಾಗೂ ಈ ಕುರಿತು ಸೂಕ್ತಕ್ರಮಕ್ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು. ಈ ಕುರಿತು ನೋಡೆಲ್ ಅಧಿಕಾರಿಗಳು ಮಾತನಾಡಿ ಅನುಮತಿ ಇಲ್ಲದೆ ರಸ್ತೆ ಅಗೆತವನ್ನು ಕೈಗೊಂಡಲ್ಲಿ ಸೂಕ್ತ ಕಾನೂನುಕ್ರಮ ಕೈಗೊಳ್ಳಲು ಸೂಚಿಸಿದರು.

ಶ್ರೀಮತಿ. ಶಾಂತಕುಮಾರಿ, ಬಾಲಾಜಿ ಬಡಾವಣೆ ಸದಸ್ಯರು ಮಾತನಾಡಿ ರಸ್ತೆಯ ಎರಡು ಬದಿಗಳಲ್ಲಿ ಗಿಡವನ್ನು ನೆಡಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸಭೆಯಲ್ಲಿ ಕೋರಿದರು. ಈ ಕುರಿತು ನೋಡೆಲ್ ಅಧಿಕಾರಿಗಳು ಮಾತನಾಡಿ ಅರಣ್ಯಾಧಿಕಾರಿಗಳೊಂದಿಗೆ ಚರ್ಚಿಸಿ ಮಳೆಗಾಲದ ಆರಂಭವಾಗುವ ಸಮಯದಲ್ಲಿ ಈ ಕುರಿತು ಕಾರ್ಯಕ್ರಮವನ್ನು ಕೈಗೊಳಬಹುದಾಗಿದ್ದು, ಈ ಕುರಿತು ಚರ್ಚಿಸಲು ಮುಂದಿನ ಸಭೆಯಲ್ಲಿ ಸಂಬಂಧಿಸಿದ ಅರಣ್ಯಾಧಿಕಾರಿಗಳು ಹಾಜರಿರುವಂತೆ ತಿಳಿಸಲು ವಾರ್ಡ್ ಕಾರ್ಯದರ್ಶಿಗಳಿಗೆ ಸೂಚಿಸಲಾಯಿತು.

ಆರೋಗ್ಯ ಇಲಾಖೆಯ ಡಾಕ್ಟರ್ ಶ್ರೀ ಪ್ರೇಮಾನಂದ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚು ಟೆಸ್ಟ್ ಮಾಡುವುದರಿಂದ ಪ್ರಕರಣ ಪತ್ತೆ ಹಚ್ಚಿ ಸಮಸ್ಯೆ ಬಗೆಹರಿಸಲು ಸಹಕಾರಿಯಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಆದ್ದರಿಂದ ಕೊಡಿಗೇಹಳ್ಳಿ ವಾರ್ಡ್ ಸಂಖ್ಯೆ:08ರ ವ್ಯಾಪ್ತಿಯಲ್ಲಿ 5 ಟೀಮ್‌ಗಳಿದ್ದು, ಕೋವಿಡ್ ಟೆಸ್ಟ್ ಸಲುವಾಗಿ ಹಾಜರಿದ್ದ ಸಾರ್ವಜನಿಕರು ಹಾಗೂ ಆರ್‌ಡಬ್ಲ್ಯೂಎ ರವರುಗಳಲ್ಲಿ ಸಹಕರಿಸಲು ಮನವಿ ಮಾಡಿದರು. ಮುಂದುವರೆದು ಕೋವಿಡ್ ಲಸಿಕೆಯನ್ನು ನೀಡುವ ಕಾರ್ಯಕ್ರಮವನ್ನು ಸರ್ಕಾರವು ಹಮ್ಮಿಕೊಂಡಿರುವುದರಿಂದ ಸಾರ್ವಜನಿಕರು ಹಾಗೂ ಆರ್‌ಡಬ್ಲ್ಯೂಎ ರವರುಗಳಿಗೆ ಲಸಿಕೆಯನ್ನು ನೀಡುವ ಕಾರ್ಯಕ್ರಮವನ್ನು ಕೊಡಿಗೇಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಾಗೂ ದಿನಾಂಕ:07.04.2021 ರಿಂದ ವೈದ್ಯಕೀಯ ತಂಡದೊಂದಿಗೆ ವಾರ್ಡ್ ಕಛೇರಿಯಲ್ಲಿಯೂ ಸಹ ಹಮ್ಮಿಕೊಳ್ಳಲಾಗಿದ್ದು, 45 ವರ್ಷ ಮೇಲ್ಪಟ್ಟ ಸಾರ್ವಜನಿಕರು ಆಧಾರ್ ಕಾರ್ಡ್ ದಾಖಲಾತಿಯೊಂದಿಗೆ ಲಸಿಕೆಯನ್ನು ಪಡೆಯಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಈ ಕುರಿತು ನೋಡೆಲ್ ಅಧಿಕಾರಿಗಳು ಮಾತನಾಡಿ ಕೋವಿಡ್–19 ಈ ರೋಗವನ್ನು ತಡೆಗಟ್ಟಲು ರೋಗ ಹರಡುವಿಕೆಯ ಸರಪಳಿಯನ್ನು ತಡೆಯಲು ಸೋಂಕಿತರನ್ನು ಅತೀ ಬೇಗನೆ ಪತ್ತೆ ಮಾಡಲು ಪರೀಕ್ಷೆಗಳನ್ನು ನಡೆಸುವುದು ಅತ್ಯವಶ್ಯಕವಾಗಿರುವುದರಿಂದ ವಾರ್ಡ್ ಸಂಖ್ಯೆ:08 ರ ಎಲ್ಲಾ ಆರ್‌ಡಬ್ಲ್ಯೂಎ ರವರುಗಳು ಸ್ವಯಂ ಪ್ರೇರಿತರಾಗಿ ತಮ್ಮ ಅಪಾರ್ಟ್‌ಮೆಂಟ್, ವಾಸಿಸುವ ಸ್ಥಳಗಳಲ್ಲಿ ಬಡಾವಣೆಗಳಲ್ಲಿ ಸುತ್ತಮುತ್ತಲಿನ ಜನರನ್ನು ಪರೀಕ್ಷೆ ಒಳಪಡಲು ಸೂಕ್ತವಾದ ತಿಳುವಳಿಕೆಯನ್ನು ನೀಡಿ ಹೆಚ್ಚು ಪರೀಕ್ಷೆಗಳನ್ನು ನಡೆಸಲು ಸಹಕಾರವನ್ನು ನೀಡುವಂತೆ ಕೋರಿದರು. ಹಾಗೆಯೇ 45 ವರ್ಷ ಮೇಲ್ಪಟ್ಟ ಎಲ್ಲಾರೂ ಆಧಾರ್ ಕಾರ್ಡ್ ದಾಖಲಾತಿಗಳೊಂದಿಗೆ ಲಸಿಕೆಯನ್ನು ಪಡೆಯುವಂತೆ ಮನವಿ ಮಾಡಿದರು.

ಅಂತಿಮವಾಗಿ ಶ್ರೀ ಗುರು, ನೋಡಲ್ ಅಧಿಕಾರಿಯವರು ಈ ಮೇಲ್ಕಂಡ ಅಂಶಗಳ ಬಗ್ಗೆ ವಿವರವಾಗಿ ಅಧಿಕಾರಿಗಳಿಗೆ ನಿರ್ದೇಶನ ನೀಡಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸಿದರು ನಂತರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

(ಪ್ರವೀಣ್ ಎ.ಆರ್.)
ಕಾರ್ಯದರ್ಶಿಗಳು ಮತ್ತು
ಕಿರಿಯ ಅಭಿಯಂತರರು
ವಾರ್ಡ್ 8, ಕೊಡಿಗೇಹಳ್ಳಿ ಉಪ ವಿಭಾಗ

06/4/21
(ಶ್ರೀ ಗುರು)
ಕಾರ್ಯಪಾಲಕ ಅಭಿಯಂತರರು ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ:08

ಮುಂದುವರೆದಿದೆ ...

**ಪ್ರತಿಯನ್ನು:-**

1. ಮಾನ್ಯ ಆಡಳಿತ ಅಧಿಕಾರಿಗಳು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯ ಅಪರ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಆರೋಗ್ಯಾಧಿಕಾರಿಗಳು, ಯಲಹಂಕ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ವಲಯ ಅರಣ್ಯಾಧಿಕಾರಿಗಳು, ಯಲಹಂಕ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಗೆ ಹಾಜರಾಗಲು ತಿಳಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ರವರ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೊಡಿಗೇಹಳ್ಳಿ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಕಳುಹಿಸಿದೆ.
10. ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ರವರ ಮಾಹಿತಿಗಾಗಿ ಕಳುಹಿಸಿದೆ.
11. ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
12. ಕಛೇರಿ ಕಡತಕ್ಕೆ.